ನನ್ನ ಪಾತ್ರವನ್ನು ಇಷ್ಟಪಟ್ಟು, ಹಾಗೆಯೇ ಕೊನೆಯಲ್ಲಿ ಬೇಜಾರೂ ಮಾಡಿಕೊಂಡರು. ನಿನ್ನ ಪಾತ್ರ ಇನ್ನಷ್ಟು ಇರಬೇಕಿತ್ತು ಎಂದು ಹೇಳಿದರು. ಅವರೆಲ್ಲರ ಮನಸ್ಸಿಗೆ ಸಿನಿಮಾ, ನನ್ನ ಪಾತ್ರ ಇಷ್ಟವಾಗಿದ್ದು ನನಗೆ ತುಂಬ ಖುಷಿ ಕೊಟ್ಟಿದೆ' ಎನ್ನುತ್ತಾರೆ ಅವರು.

ತನ್ನ ಮೊದಲ ಸಿನಿಮಾ ಸೂಪರ್ ಹಿಟ್ ಆಗಿದೆ, ಹಾಗಾಗಿ ನನಗೆ ಸಾಲು ಸಾಲು ಅವಕಾಶಗಳು ಬರುತ್ತವೆ, ನಾನು ನಟಿಸಿದ ಸಿನಿಮಾಗಳೆಲ್ಲ ಹಿಟ್ ಆಗಿಬಿಡುತ್ತವೆ ಎಂಬ ಭ್ರಮೆಗಳೆಲ್ಲ ಅವರಿಗೆ ಇಲ್ಲ. 'ಯಾವುದೇ ಕಲಾವಿದ/ಕಲಾವಿದೆ, ಎಷ್ಟು ದೊಡ್ಡ ಸಿನಿಮಾದಲ್ಲಿ ನಟಿಸಿದ್ದರೂ, ಅವರು ನಟಿಸಿದ ಸಿನಿಮಾ ಎಷ್ಟು ದೊಡ್ಡ ಹಿಟ್ ಆಗಿದ್ದರೂ ಅವರ ಭವಿಷ್ಯ ಏನಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನನಗೂ ಅಷ್ಟೇ, ಸಾಕಷ್ಟು ಅವಕಾಶಗಳು ಬರಬಹುದು ಅಥವಾ ಆರೆಂಟು ತಿಂಗಳು ಕೆಲಸವೇ ಇಲ್ಲದೆ ಕೂಡುವಂಥ ಪರಿಸ್ಥಿತಿಯೂ ಬರಬಹುದು. ಮುಂದಿನ ಸಿನಿಮಾ ಹೇಗೆ ಆಗುತ್ತದೆ ಎಂಬುದನ್ನೂ ಹೇಳುವುದು ಕಷ್ಟ. ಹಾಗಾಗಿ ಕಾದು ನೋಡುವುದು, ಶ್ರದ್ಧೆಯಿಂದ ಕೆಲಸ ಮಾಡುವುದು ಇಷ್ಟೇ ನಮ್ಮ ಕೈಯಲ್ಲಿ ಇರುವುದು' ಎನ್ನುವ ಶ್ರೀನಿಧಿ, 'ಮುಂದೆಯೂ ಹೀಗೆ ದೊಡ್ಡ ಸಿನಿಮಾಗಳಲ್ಲಿಯೇ ನಟಿಸಬೇಕು ಎಂದೇನೂ ನಾನು ಅಂದುಕೊಂಡಿಲ್ಲ. ಹಾಗೆ ನೋಡಿದರೆ ಸಿನಿಮಾಗಳಲ್ಲಿ ದೊಡ್ಡದು ಸಣ್ಣದು ಎಂದಿರುವುದಿಲ್ಲ. ಕಥೆ ಮುಖ್ಯ, ತಂಡ ಮುಖ್ಯ. ಅದು ಚೆನ್ನಾಗಿದ್ದರೆ ಸಿನಿಮಾ ಕೂಡ ಚೆನ್ನಾಗಿಯೇ ಆಗುತ್ತದೆ' ಎನ್ನುತ್ತಾರೆ.

ಅವರ ಪ್ರಕಾರ ಒಂದು ಸಿನಿಮಾ ತಯಾರಿಕೆಯಲ್ಲಿ ನಿರ್ದೇಶಕನ ಪಾತ್ರವೇ ಬಹುಮುಖ್ಯವಾದದ್ದು. 'ನಿರ್ದೇಶಕರು ತುಂಬ ಮುಖ್ಯ. ಕಥೆ ಅವರದ್ದಾಗಿರುತ್ತದೆ. ಬರವಣಿಗೆ ಅವರದ್ದಾಗಿರುತ್ತದೆ. ಕಲ್ಪನೆ ಅವರದ್ದಾಗಿರುತ್ತದೆ. ಹಾಗಾಗಿ ಇಡೀ ತಂಡಕ್ಕೆ ಅವರೇ ನಾಯಕ. ಅವರು ಚೆನ್ನಾಗಿ ಕೆಲಸ ಮಾಡಿದರಷ್ಟೇ ನಾವೆಲ್ಲರೂ ಬದುಕೋಕೆ ಸಾಧ್ಯವಾಗೋದು. ನಿರ್ದೇಶಕನ ನಂತರದ ಸ್ಥಾನ ಕಥೆಗಿದೆ. ನಂತರ ನಟರು, ನಿರ್ಮಾಪಕರು ಎಲ್ಲರೂ ಬರುತ್ತಾರೆ' ಎಂದು ತಮ್ಮ ಸಿನಿಮಾ ಕುರಿತ ತಮ್ಮ ದೃಷ್ಟಿಕೋನವನ್ನು ಮುಂದಿಡುತ್ತಾರೆ.

ಶ್ರೀನಿಧಿ ಅವರ ನಟನೆಯ ಎರಡನೇ ಸಿನಿಮಾ ಕೂಡ ತೆರೆಗೆ ಬರಲು ಸಿದ್ಧವಾಗಿದೆ. 2019ರಲ್ಲಿ ಅವರು ತಮಿಳಿನ ವಿಕ್ರಮ್ ಜೊತೆಗೆ ನಟಿಸಿದ್ದ 'ಕೋಬ್ರಾ' ಸಿನಿಮಾ ಚಿತ್ರೀಕರಣ ಮುಗಿದಿದೆ. ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ. ಕೆ.ಜಿ.ಎಫ್. ಸಿನಿಮಾದ ರೀನಾ ಪಾತ್ರಕ್ಕಿಂತ ಬಹಳ ಭಿನ್ನವಾದ ಪಾತ್ರದಲ್ಲಿ ಅವರು ಆ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ.

ನಿರ್ದೇಶಕರನ್ನು ತುಂಬ ಗೌರವದಿಂದ ಕಾಣುವ ಶ್ರೀನಿಧಿ ಅವರ ಆಸಕ್ತಿ ಇರುವುದು ಸಂಕಲನದಲ್ಲಿ. 'ಶೂಟ್ ಮಾಡಿಕೊಂಡು ಬಂದ ದೃಶ್ಯ ತುಣುಕುಗಳನ್ನು ಜೋಡಿಸಿ ಸಿನಿಮಾಕ್ಕೆ ಒಂದು ರೂಪ ಕೊಡುವ ಕೆಲಸ ಸಂಕಲನ. ಅದರ ಬಗ್ಗೆ ನನಗೆ ಕುತೂಹಲವಿದೆ. ಸಂಕಲನ ಕಲಿತುಕೊಳ್ಳಬೇಕು ಎಂಬ ಆಸೆಯೂ ಇದೆ' ಎನ್ನುತ್ತಾರೆ ಅವರು.

ತಮ್ಮ ಹುಟ್ಟೂರಿನ ಬಗ್ಗೆ ಈಗಲೂ ಆಪ್ತಭಾವ ಉಳಿಸಿಕೊಂಡಿರುವ ಅವರು, 'ಊರಿನ ಕಡೆಯ ತಿಂಡಿ ಏನೇ ಕೊಟ್ರೂ ತಿಂತೀನಿ. ನಾನು ಮೊದಲೇ ತಿಂಡಿಪೋತಿ. ಅದರಲ್ಲಿಯೂ ನೀರು ದೋಸೆ, ಮೀನು, ಕೋರಿ ರೊಟ್ಟಿ ಅಂದರಂತೂ ತುಂಬ ಇಷ್ಟ' ಎಂದು ಉತ್ಸಾಹದಿಂದ ಹೇಳಿಕೊಳ್ಳುತ್ತಾರೆ.

'ನಾನು ಬಾಲ್ಯದಿಂದಲೂ ಒಂದು ರೀತಿಯ ಫಿಲ್ಮಿ ಹುಡುಗಿ. ನೋಡಿದ ಸಿನಿಮಾಗಳ ಪಾತ್ರಗಳಲ್ಲೆಲ್ಲ ನನ್ನನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಹಾಗಾಗಿ ಯಾವುದೋ ಒಂದು ಪಾತ್ರಕ್ಕೆ ಅಂಟಿಕೊಳ್ಳಲು ಈಗಲೂ ಸಾಧ್ಯವಾಗಲ್ಲ. ಸಸ್ಪೆನ್ಸ್ ಥ್ರಿಲ್ಲರ್, ಪೀರಿಯಾಡಿಕಲ್, ಮೈಥಾಲಜಿ, ಆ್ಯಕ್ಷನ್ ಎಲ್ಲ ಬಗೆಯ ಸಿನಿಮಾಗಳಲ್ಲಿಯೂ ನಟಿಸಬೇಕು. ಎಲ್ಲ ರೀತಿಯ ಅನುಭವಗಳನ್ನೂ ಗಳಿಸಿಕೊಳ್ಳಬೇಕು. ಅಂಥ ಬಗೆಬಗೆಯ ಅವಕಾಶಗಳು ನನಗೆ ಸಿಗಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ' ಎಂದು ಮತ್ತದೇ ಹೂನಗೆಯನ್ನು ತೇಲಿಬಿಟ್ಟು ಮಾತುಮುಗಿಸಿದರು ಶ್ರೀನಿಧಿ. ■



# ಹೊಸ ಸಿನಿಮಾ ಬಜಾರ್!

ಇದು ಹೇಳಿ ಕೇಳಿ ಒಟಿಟಿ ಜಮಾನ. ಅಮೆಜಾನ್ ಪ್ರೈಮ್, ನೆಟ್‌ಫ್ಲಿಕ್ಸ್‌ನಂಥ ಒಟಿಟಿ ವೇದಿಕೆಗಳ ಜೊತೆಗೆ ವೂಟ್, ಜಿ5, ಸೋನಿಲೈವ್‌ನಂಥ ಟೀವಿ ವಾಹಿನಿಗಳ ಒಟಿಟಿಗಳೂ ಸ್ಪರ್ಧೆಗೆ ಬಿದ್ದಿವೆ. ಪಕ್ಕದ ತೆಲುಗಿನಲ್ಲಿ, 'ಆಹಾ!'ದಂಥ ಪ್ರಾದೇಶಿಕ ಭಾಷೆಗೆ ಒಟಿಟಿ ರೂಪಿಸುವ ಪ್ರಯತ್ನಗಳೂ ನಡೆದಿವೆ. ಅಂಥದ್ದೇ ಒಂದು ಪ್ರಯತ್ನ ಕನ್ನಡದಲ್ಲಿಯೂ ಚಿಗುರಿಕೊಂಡಿವೆ. ಅದರ ಭಾಗವಾಗಿಯೇ ಇತ್ತೀಚೆಗೆ, 'ಸಿನಿಬಜಾರ್' ಎಂಬ ಹೊಸ ಆ್ಯಪ್ ಬಿಡುಗಡೆಯಾಗಿದೆ.

ಭಾಸ್ಕರ್ ವೆಂಕಟೇಶ್ ಹಾಗೂ ಉಮೇಶ್ ಬಣಕಾರ್ ಅವರು ಜೊತೆಯಾಗಿ ಈ ಆ್ಯಪ್ ಹೊರತಂದಿದ್ದಾರೆ. ಇಪ್ಪತ್ತೈದು ಮೂವತ್ತು ರೂಪಾಯಿ ಕೊಟ್ಟು ಸಿನಿಮಾ ನೋಡಬಹುದು. ಹಣ ಪಾವತಿಸಿದ 24 ಗಂಟೆಗಳವರೆಗೆ ಸಿನಿಮಾ ನೋಡುವ ಅವಕಾಶ ಇರುತ್ತದೆ. ಆ ಅವಧಿಯಲ್ಲಿ ಎಷ್ಟು ಸಿನಿಮಾಗಳನ್ನು ಬೇಕಾದರೂ ನೋಡಬಹುದು. ಈ ಸಿನಿಮಾವನ್ನು ಎಷ್ಟು ಜನ ವೀಕ್ಷಿಸಿದ್ದಾರೆ ಎಂಬ ಮಾಹಿತಿ ಕೂಡ ನಿರ್ಮಾಪಕರಿಗೆ ತಿಳಿಯಲಿದೆ. 'ಈ ಆ್ಯಪ್ ಮೂಲಕವೇ ಚಿತ್ರವನ್ನು ಬಿಡುಗಡೆ ಮಾಡಲು ಇಚ್ಛಿಸುವವರು ನಮ್ಮ ತಂಡವನ್ನು ಸಂಪರ್ಕಿಸಬಹುದು. ಕನ್ನಡ ನಿರ್ಮಾಪಕರಿಗೆ ಒಳಿತಾಗಲಿ ಎಂಬುದೇ ನಮ್ಮ ಆಶಯ' ಎನ್ನುತ್ತಾರೆ ಭಾಸ್ಕರ್ ವೆಂಕಟೇಶ್. ■

# ಉಪ್ಪಿ – ಆರ್‌ಜಿವಿ ಕೊಂಬೊ

ಕನ್ನಡ ಚಿತ್ರರಂಗದಲ್ಲಿ 'ಬುದ್ಧಿವಂತ ನಿರ್ದೇಶಕ' ಎಂದು ಹೆಸರು ಮಾಡಿದವರು ಉಪೇಂದ್ರ. ಹಾಗೆಯೇ ತೆಲುಗಿನಲ್ಲಿ, ನಂತರ ಬಾಲಿವುಡ್‌ನಲ್ಲಿಯೂ ತಮ್ಮ ವಿಚಿತ್ರ ಸಿನಿಮಾಗಳ ಮೂಲಕವೇ ಗುರ್ತಿಸಿಕೊಂಡವರು ರಾಮ್‌ಗೋಪಾಲ್ ವರ್ಮ. ಈಗ ಈ ಇಬ್ಬರು ಬುದ್ಧಿವಂತರ ಕಾಂಬಿನೇಷನ್‌ನಲ್ಲಿ ಪ್ಯಾನ್ ಇಂಡಿಯಾ ಸಿನಿಮಾವೊಂದು ತಯಾರಾಗುತ್ತಿದೆ. 'ಐ ಆ್ಯಮ್ ಆರ್' ಎಂಬ ಹೆಸರಿನ ಈ ಚಿತ್ರದ ಟೈಟಲ್ ಅನ್ನು ಇತ್ತೀಚೆಗೆ ಸುದೀಪ್ ಬಿಡುಗಡೆ ಮಾಡಿದ್ದಾರೆ.

'ಈಗಾಗಲೇ ನಟನೆ ಮತ್ತು ನಿರ್ದೇಶನ ಎರಡರಲ್ಲಿಯೂ ಪ್ರಸಿದ್ಧರಾಗಿರುವ ಉಪೇಂದ್ರ ಜೊತೆ ಕೆಲಸ ಮಾಡಲು ಸಂತೋಷವೆನಿಸುತ್ತಿದೆ. 'ಆರ್' ಎಂದರೆ ಏನು ಎಂದು ಮುಂದೆ ಹೇಳುತ್ತೇವೆ' ಎಂದು ವರ್ಮಾ ಕುತೂಹಲದ ಒಗ್ಗರಣೆ ಹಾಕಿದ್ದಾರೆ. ಈ ಚಿತ್ರಕ್ಕೆ ರಾಜ್ ಯಜಮಾನ್ ಹಣ ಹೂಡಿದ್ದಾರೆ.




ನಟನೆ ಮತ್ತು ನಿರ್ದೇಶನ ಎರಡರಲ್ಲಿಯೂ ಹೆಸರು ಮಾಡಿರುವ ಉಪೇಂದ್ರ ಮತ್ತು ನಿರ್ದೇಶನದಲ್ಲಿ ತಮ್ಮದೇ ಛಾಪು ಒತ್ತಿ, ಆಫ್‌ಸ್ಕ್ರೀನಲ್ಲಿ ಅತ್ಯುತ್ತಮ ನಟ ಎಂಬ ಭಾವ ಹುಟ್ಟಿಸುವ ಆರ್‌ಜಿವಿ ಈ ಇಬ್ಬರ ಕಾಂಬಿನೇಷನ್‌ನ ಸಿನಿಮಾ ಹೇಗಿರಬಹುದು ಎಂಬ ಕುತೂಹಲವಂತೂ ಇದ್ದೇ ಇರುತ್ತದೆ. ಅದಕ್ಕೆ ಉತ್ತರ ಮಾತ್ರ ತೆರೆಯ ಮೇಲೆಯೇ ಪಡೆದುಕೊಳ್ಳಬೇಕು. ■